**ಓ.ಎಸ್ ನಂಃ 258/2022**

**ಪಿ .ಡಬ್ಲು–1**

ಸಾಕ್ಷಿಯನ್ನು ದಿನಾಂಕಃ 21.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ಪ್ರತಿವಾದಿ *1* ರವರ ಪರ ಶ್ರೀ. ಎಂ ಎಸ್ ಪಿ ವಕೀಲರಿಂದ**

ನಿಮ್ಮ ತಂದೆ ನಾರಾಯಣಪ್ಪನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ . ದೊಡ್ಡ ಹೆಂಡತಿಯ ಮಗ ದೊಡ್ಡ ಮುನಿಯಪ್ಪ ಎಂದರೆ ಸರಿ . 1 ನೇ ಪ್ರತಿವಾದಿ ದೊಡ್ಡ ಮುನಿಯಪ್ಪನವರ ಹೆಂಡತಿ ಎಂದರೆ ಸರಿ . ನಾರಾಯಣಪ್ಪನವರ 2 ನೇ ಹೆಂಡತಿಗೆ ನೀವು , 2 ನೇ ವಾದಿ , 2 ರಿಂದ 6 ನೇ ಪ್ರತಿವಾದಿಗಳು ಮಕ್ಕಳು ಎಂದರೆ ಮುಂದುವರೆದು 6 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಎಂದು ನುಡಿಯುತ್ತಾರೆ. ವೆಂಕಟಮ್ಮ ಮತ್ತು ಹನುಮಕ್ಕ ರವರು ತೀರಿಕೊಂಡಿರುತ್ತಾರೆ. ಸದರಿಯವರಿಗೆ ಮಕ್ಕಳು ಇರುತ್ತಾರಾ ಎಂದರೆವೆಂಕಟಮ್ಮನವರಿಗೆ ಮಕ್ಕಳು ಇರುವುದಿಲ್ಲ ಹನುಮಕ್ಕನವರಿಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಹನುಮಕ್ಕನವರ ಮಕ್ಕಳನ್ನು ಈ ದಾವಾ ದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ 3 ನೇ ವಾದಿಯನ್ನು ಮಾತ್ರ ಸೇರಿಸಿದ್ದು ಉಳಿದ ಮೂರು ಜನರನ್ನು ಸೇರಿಸಿರುವುದಿಲ್ಲ.

ರೆಡ್ಡಹಳ್ಳಿಯಲ್ಲಿ ನಿಮಗೆ ಹಾಗೂ ಪ್ರತಿವಾದಿಯರಿಗೆ ವಾಸ ಮಾಡಲು ಪ್ರತ್ಯಕ ಮನೆ ಇದೆ ಎಂದರೆ ಸರಿ . ನೀವು ವಾಸವಾಗಿರುವ ಮನೆಯ ಖಾತಾ ನಂಬರ್ ಏನು ಎಂದರೆ ಹೇಳಲಾಗುವುದಿಲ್ಲ. 2 ನೇ ವಾದಿಯ ಮನೆಯ ನಂಬರ್ ನನಗೆ ಗೊತ್ತಿಲ್ಲ. ನಿಮ್ಮ ಮನೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ 21 ಕ್ಕೆ 30 ಇರಬಹುದು. 2 ನೇ ವಾದಿಯ ಮನೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದರೆ 21 ಕ್ಕೆ 30 ಇರಬಹುದು. ಮನೆ ಬಿಟ್ಟು ನಿವೇಶನ ಕೂಡ ಇರುತ್ತದೆ ಎಂದರೆ ಸರಿ . ನಿಮ್ಮ ಮನೆ , ನಿವೇಶನ ಮತ್ತು 2 ನೇ ವಾದಿಯ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿಯನ್ನು ಹೊರತುಪಡಿಸಿ ಒಟ್ಟು ಕುಟುಂಬದ ಬೇರೆ ಯಾವ ಜಮೀನು ಇರುತ್ತದೆ ಎಂದರೆ ಇರುವುದಿಲ್ಲ. ಬೇರೆ ಒಟ್ಟು ಕುಟುಂಬದ ಆಸ್ತಿಗಳನ್ನು ಸೇರಿಸದೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಗಳನ್ನು ಸೇರಿಸದೇ ಈ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಮನೆ ಮತ್ತು ನಿವೇಶನ ನಿಮ್ಮ ಸ್ವಯಾರ್ಜಿತ ಆಸ್ತಿ ಎಂದು ವಾದ ಪತ್ರದಲ್ಲಿ ಬರೆಸಿದ್ದಿರಾ ಎಂದರೆ ಇಲ್ಲ. ದಾವಾ ಆಸ್ತಿ ಹೇಗೆ ಪಿತ್ರಾರ್ಜಿತ ಅಸ್ತಿ ಅಗುತ್ತದೆ ಎಂದರೆ ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಸಾಗುವಳಿ ಚೀಟಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಿಕ್ಕಿರುವುದಿಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಸೇರಿದ್ದು ನಿಮಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**